

# ವಿಶ್ವಸುಂದರಿಯ ನೆನಪೊತ್ತಿ...

ಮಾಜಿ ವಿಶ್ವಸುಂದರಿ ಸುಷ್ಮಿತಾ ಸೇನ್, ಮತ್ತೆ ಸೌಂದರ್ಯ ಸ್ಪರ್ಧೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ. ಈಗ ಅದು ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡಬಹುದು. ಆಕೆ ಇಲ್ಲಿ ಸ್ಪರ್ಧಿಯಲ್ಲ, ಬದಲಿಗೆ ತೀರ್ಪುಗಾರ್ತಿ!

1994ರಲ್ಲಿ ಮನಿಲಾದಲ್ಲಿ ನಡೆದ ಸ್ಪರ್ಧೆಯಲ್ಲಿ ಕಿರೀಟ ಮುಡಿಗೇರಿಸಿಕೊಂಡು ಸುಷ್ಮಿತಾ ಗೆಲುವಿನ ನಗೆ ಬೀರಿದ್ದಳು. ಕಾಕತಾಳೀಯವೆಂದರೆ, ಆಕೆ 2017ರ ವಿಶ್ವಸುಂದರಿಯನ್ನು ಆಯ್ಕೆ ಮಾಡುವ ತೀರ್ಪುಗಾರರ ಸರದಿಯಲ್ಲಿ ಕೂತಿರುವುದು ಅದೇ ಮನಿಲಾದಲ್ಲಿ. 23 ವರ್ಷದ ಹಿಂದೆ ಪ್ರಶಸ್ತಿ ಪಡೆದ ಬಳಿಕ ಆಕೆ ಮತ್ತೆ ಮನಿಲಾಕ್ಕೆ ಕಾಲಿಟ್ಟಿದ್ದಾಳೆ. ಈ ಗಳಿಗೆಯನ್ನು ಆಕೆ ಉದ್ವೇಗದ, ಭಾವುಕ ಕ್ಷಣ ಎಂದು ಹೇಳಿಕೊಂಡಿದ್ದಾಳೆ. ಕುಣಿಯುತ್ತಿರುವ ಹೃದಯದೊಂದಿಗೆ ಫಿಲಿಪ್ಪೀನ್ಸ್‌ಗೆ ಹಾರುತ್ತಿರುವ ಸಂಭ್ರಮವನ್ನು ಹಂಚಿಕೊಂಡಿದ್ದಾಳೆ. ಜಗದೇಕ ಸುಂದರಿ ಎಂಬ ಹೆಮ್ಮೆಗೆ ಪಾತ್ರವಾದ ಕ್ಷಣವನ್ನು ಆಕೆ ಮತ್ತೆ ಮತ್ತೆ ನೆನಪಿಸಿಕೊಂಡು ಸುಖಿಸುತ್ತಿದ್ದಾಳೆ. ಅದೊಂಥರ ಆಕಾಶವೇ ಕೈಗೆ ಎಟುಕಿದ ಅನುಭವ ಎಂದು ನೆನಪಿಸಿಕೊಂಡಿದ್ದಾಳೆ. ತನಗೆ ಪಟ್ಟ ಕೊಟ್ಟ ಫಿಲಿಪ್ಪೀನ್ಸ್‌ನ ಊರನ್ನು ತನ್ನ ಮನೆ ಎಂದೇ ಆಕೆ ಕರೆದಿದ್ದಾಳೆ.

65ನೇ ವಿಶ್ವಸುಂದರಿ ಸ್ಪರ್ಧೆಯಲ್ಲಿ ಈ ಬಾರಿ ರೋಶ್ಮಿತಾ ಹರಿಮೂರ್ತಿ ಭಾರತವನ್ನು ಪ್ರತಿನಿಧಿಸುತ್ತಿದ್ದಾಳೆ. 23 ವರ್ಷದ ಹಿಂದೆ ಭಾರತಕ್ಕೆ ಸುಷ್ಮಿತಾ ತಂದುಕೊಟ್ಟ ಸಂಭ್ರಮವನ್ನು ರೋಶ್ಮಿತಾ ಮರಳಿ ನೀಡುತ್ತಾಳಾ ನೋಡಬೇಕು.



# ನಟಿಯರಿಗಿದು ಸುಭಿಕ್ಷದ ಕಾಲ!

ಆರಂಭದ ಸಿನಿಮಾಗಳಲ್ಲಿ ಪಕ್ಕದ್ಮನೆ ಹುಡುಗಿಯಂತೆ ಕಾಣಿಸಿಕೊಂಡು ಮುದ ನೀಡುತ್ತಿದ್ದ ಸೋನಾಕ್ಷಿ ಸಿನ್ಹಾ, ಇತ್ತೀಚೆಗೆ ಆ್ಯಕ್ಷನ್ ಚಿತ್ರಗಳತ್ತ ಒಲವು ತೋರುತ್ತಾ, ಲೇಡಿ ಬಾಂಡ್ ಎಂದು ಕರೆಸಿಕೊಳ್ಳಲು ಓಡುತ್ತಿದ್ದಾಳೆ. 'ದಬಂಗ್'ನಿಂದ ಆರಂಭವಾದ ಪಯಣದಲ್ಲಿ 'ಅಕಿರಾ', 'ಫೋರ್ಸ್ 2', 'ನೂರ್'ನಂತಹ ಆ್ಯಕ್ಷನ್ ಸಿನಿಮಾಗಳು ಆಕೆಯ ಚಹರೆಯನ್ನು ಬದಲಿಸಿವೆ. ಅವುಗಳ ನಡುವೆ ವೈವಿಧ್ಯಮಯ ಪಾತ್ರಗಳೂ ಆಕೆಯನ್ನು ಹುಡುಕಿಕೊಂಡು ಬರುತ್ತಿವೆ. ನಾಯಕ ಪ್ರಧಾನ ಸಿನಿಮಾಗಳ ಹರಿವನ್ನು ಬಾಲಿವುಡ್ ಬದಲಿಸಿಕೊಂಡಿದೆ ಎಂಬ ಖುಷಿಯ ಮಾತುಗಳನ್ನು ಕೆಲವು ನಟಿಯರು ಆಗಾಗ್ಗೆ ಆಡುತ್ತಿದ್ದಾರೆ. ಅವರ ಸಾಲಿಗೆ ಈಗ ಸೋನಾಕ್ಷಿ ಸೇರಿಕೊಂಡಿದ್ದಾಳೆ. ಮಹಿಳಾ ಕೇಂದ್ರಿತ ಚಿತ್ರಗಳ ಕಡೆಗೆ ನಿರ್ದೇಶಕರು ಇತ್ತೀಚೆಗೆ ಹೆಚ್ಚು ಒಲವು ತೋರಿಸುತ್ತಿದ್ದಾರೆ. ನಟಿಯರಿಗೆ ಉದ್ಯಮದಲ್ಲಿ ಇದು ಶ್ರೇಷ್ಠ ಕಾಲ ಎನ್ನುವುದು ಆಕೆಯ ಅಭಿಪ್ರಾಯ.

'ನಮಗಾಗಿ ಅದ್ಭುತ ಪಾತ್ರಗಳನ್ನು ಬರೆಯಲಾಗುತ್ತಿದೆ. ಚಿತ್ರ ನಿರ್ದೇಶಕರು ಸ್ತ್ರೀ ಕೇಂದ್ರಿತ ಪಾತ್ರಗಳತ್ತ ಒಲವು ತೋರಿಸುತ್ತಿದ್ದಾರೆ. ನಟಿಯರ ಪಾಲಿಗಿದು ಶ್ರೇಷ್ಠ ಸಮಯ' ಎಂದಿದ್ದಾಳೆ ಸೋನಾಕ್ಷಿ. ತಮಿಳಿನಲ್ಲಿ ರಜನಿಕಾಂತ್ ಜತೆ 'ಲಿಂಗಾ' ಚಿತ್ರದಲ್ಲಿ ಕಾಣಿಸಿಕೊಂಡಿದ್ದ ಆಕೆಯಲ್ಲಿ, ಇನ್ನಷ್ಟು ಪ್ರಾದೇಶಿಕ ಭಾಷಾ ಸಿನಿಮಾಗಳಲ್ಲಿ ನಟಿಸುವ ಬಯಕೆಯೂ ಉಂಟಾಗಿದೆ. ಬಂಗಾಳಿ ಮತ್ತು ಭೋಜ್‌ಪುರಿ ಸಿನಿಮಾಗಳನ್ನು ನೋಡಿದ್ದೇನೆ. ತಮಿಳಿನ ಒಂದು ಸಿನಿಮಾದಲ್ಲಿ ನಟಿಸಿದ್ದೇನೆ. ದಕ್ಷಿಣದಿಂದ ಅನೇಕ ಆಹ್ವಾನಗಳೂ ಬರುತ್ತಿವೆ. ಹೀಗಿರುವಾಗ ಇನ್ನಷ್ಟು ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಬಾರದೇಕೆ? ಆದರೆ ಒಳ್ಳೆಯ ಕಥೆ ಇರಬೇಕಷ್ಟೇ ಎಂಬ ಷರತ್ತನ್ನು ನೆನಪಿಸುತ್ತಾಳೆ.

★ ಅಮಿ